**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

ಸಿ.ಸಿ. ನಂ.4762-2023

ಪಿಡಬ್ಲ್ಯೂ-01
ಸಿಡಬ್ಲ್ಯೂ-01

ಸಾಕ್ಷಿದಾರನ ಹೆಸರುಃ- ಬಿ.ಎಂ.ಗಂಗಾಧರಯ್ಯ
ತಂದೆ ಹೆಸರು ಲೇಟ್ ಮುದ್ದರಾಮಯ್ಯ
ವಯಸ್ಸು 58 ವರ್ಷ
ಉದ್ಯೋಗ ಅಬಕಾರಿ ಉಪನಿರೀಕ್ಷಕರು, ಶಿರಾ,
ವಾಸ ಶಿರಾ,

**ಸಾಕ್ಷಿಗೆ ದಿಃ 17.06.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ**

2008 ರಿಂದ ದಿಃ27.01.2022 ವರೆವಿಗೂ ನಾನು ಕುಣಿಗಲ್ ವಲಯದಲ್ಲಿ ಅಬಕಾರಿ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16.07.2021 ರಂದು ಬೆಳಿಗ್ಗ 10.45 ಸಮಯದಲ್ಲಿ ಚಾ.ಸಾ. 4 ಅವರಿಗೆ ಅಕ್ರಮವಾಗಿ ಕೊತ್ತಗೆರೆ ಗ್ರಾಮದ ಅಂಬೇಡ್ಕರ ಭವನದ ಮುಂಭಾಗ ಟಿ.ವಿ.ಎಸ್ ಎಕ್ಸಲೇ ಹೇವಿ ಡ್ಯೂಟಿ ವಾಹನ ನಂ ಕೆ.ಎ 43 ಜಿ- 1178 ನೇದರಲ್ಲಿ ಮದ್ಯ ಸಾಗಾಟ ಮಾಡುತ್ತಿರುವ ಬಗ್ಗೆ ಬಂದ ಬಾತ್ಮಿಯ ಮೇರೆಗೆ ನಾನು ಚಾಸಾ 2, 3 ಅವರು ಚಾಸಾ 4 ಅವರೊಂದಿಗೆ ಕೊತ್ತಗೆರೆ ಗ್ರಾಮದ ಅಂಬೇಡ್ಕರ ಭವನದ ಮುಂಭಾಗ ರಸ್ತೆಯಲ್ಲಿ ಗಸ್ತು ನಡೆಸುತ್ತಿದ್ದೇವು. ಸದರಿ ವೇಳೆಯಲ್ಲಿ ದ್ವಿ ಚಕ್ರವಾಹನ ಬರುವುದನ್ನು ಕಂಡು ನಾವುಗಳು ತಡೆದು ನಿಲ್ಲಿಸಿ ನೋಡಲಾಗಿ ಟಿ.ವಿ.ಎಸ್ ವಾಹನ ಮದ್ಯಭಾಗದಲ್ಲಿ 1 ಬಿಳಿ ಪ್ಲಾಸ್ಟಿಕ್ ಚೀಲ ಇಟ್ಟಿರುವುದನ್ನು ಕಂಡು ಬಂದಿರುತ್ತದೆ. ಸದರಿ ವಾಹನ ಚಾಲಕನನ್ನು ವಿಚಾರಿಸಿ ನಾವು ಆತನನ್ನು ತಡೆದು ನಿಲ್ಲಿಸಿದ ಬಗ್ಗೆ ವಿಚಾರ ತಿಳಿಸಿರುತ್ತೇವೆ. ಕೋವಿಡ್ 19 ಇದ್ದ ಕಾರಣ ರಸ್ತೆಯಲ್ಲಿ ಯಾರು ಸ್ವಳೀಯರು ಇಲ್ಲದ ಕಾರಣ ಚಾಸಾ 4 ಅವರು ನಮ್ಮನ್ನೇ ಪಂಚರಾಗಲು ಕೋರಿರುತ್ತಾರೆ. ನಾವು ಒಪ್ಪಿಕೊಂಡು ಪರಸ್ಪರ ಅಂಗ ಶೋದನೆ ಮಾಡಿಕೊಂಡು ನ್ಯಾಯಾಲಯದಿಂದ ಶೋದನಾ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ವಾಹನವನ್ನು ಶೋಧನೆ ಮಾಡಲು ಸ್ಥಳದಲ್ಲಿ 1965 ಕೆ.ಇ ಆಕ್ಟ್ ಕಲಂ 54 ರ ಅಡಿಯಲ್ಲಿ

ಸಮುಚಿತ ವಾರೆಂಟ್ ಅನ್ನು ಸ್ಥಳದಲ್ಲಿಯೇ ಸಿದ್ದಪಡಿಸಿಕೊಂಡು ಚಾ.ಸಾ. 5 ಅವರು ಅವರಿಗೆ ಇದ್ದಂತಹ ಅಧಿಕಾರ ಬಳಸಿಕೊಂಡು ವಾರೆಂಟ್ ಅನ್ನು ತಯಾರಿಸಿ ನಮ್ಮಗಳ ಸಹಿ ಹಾಗೂ ವಾಹನ ಚಾಲಕನ ಸಹಿಯನ್ನು ಪಡೆದು ಅಧಿಕಾರಿಗಳು ಸಹಿ ಮಾಡಿರುತ್ತಾರೆ. ನಂತರ ಚಾಸಾ 3 ಅವರು ವಾಹನದಲ್ಲಿದ್ದ ಬೀಳಿ ಪ್ಲಾಸ್ಟಿರ್ ಚೀಲವನ್ನು ಕೆಳಗಿಳಿಸಿ ನೋಡಲಾಗಿ ಅದರಲ್ಲಿ ರಟ್ಟಿನ ಪೆಟ್ಟಿಗೆ ಮತ್ತು ಮದ್ಯ ತುಂಬಿದ ಟೆಟ್ರಾ ಪ್ಯಾಕೇಟಗಳು ಕಂಡು ಬಂದಿರುತ್ತವೆ. ಅವುಗಳನ್ನು ಪರಿಶೀಲಿಸಲಾಗಿ 180 ಎಂ.ಎಲ್. ನ 10 ಓಟಿ ವಿಸ್ಕಿಯ ಟೆಟ್ರಾ ಪ್ಯಾಕೇಟಗಳು, 180 ಎಂ.ಎಲ್ ನ 10 ಬ್ಯಾಗ್ ಪೇಪರ್ ವಿಸ್ಕಿಯ ಟೆಟ್ರಾ ಪ್ಯಾಕೇಟಗಳು, 90 ಎಂ.ಎಲ್. ನ 52 ರಾಜಾ ವಿಸ್ಕಿ ಸಾಚೇಟ್ ಗಳು ಮತ್ತು ಕೆ.ಎಫ್. ಸ್ಟ್ರಾರಂಗ್ 330 ಮಿಲಿಯ 24 ಟಿನ್ ಗಳು ಒಟ್ಟು 8.280 ಎಂ.ಎಲ್ ಮದ್ಯ ಮತ್ತು 7.920 ಬಿಯರ್ ಇದ್ದದ್ದು ಕಂಡು ಬಂದಿರುತ್ತದೆ. ಎಲ್ಲಾ ಮದ್ಯ ಮತ್ತು ಬಿಯರಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದು ಬಿಳಿ ಚೀಲದಲ್ಲಿ ಹಾಕಿ ಬಿಳಿ ದಾರದಿಂದ ಕಟ್ಟಿ ಇಲಾಖಾ ಮುದ್ರ ಸಂಖ್ಯೆ:167 ರಿಂದ ಅರಗನ್ನು ಹಚ್ಚಿ ಸೀಲ್ ಮಾಡಿರುತ್ತೇವೆ. ಉಳಿದ ಮು. ಮಾ. ಗಳನ್ನು ಅದೇ ಬಿಳಿ ಚೀಲದಲ್ಲಿ ಕಟ್ಟಲಾಯಿತು. ರಾಸಾಯನಿಕ ಪರೀಕ್ಷೆಗೆ ತಗೆದ ಮು. ಮಾ. ಗಳ ಮೇಲೆ ಮಾದರಿ ಸೀಲಿನ ನಕಲನ್ನು ಹಾಕಿ ನಮ್ಮಗಳ ಸಹಿ ಮತ್ತು ಚಾ.ಸಾ. 5 ಅವರ ಸಹಿ ಪಡೆಯಲಾಯಿತು. 2 ಚೀಲಗಳಿಗೆ ಅಂಟಿಸಲಾಯಿತು. ಹೆಚ್ಚಿನ ಪ್ರಮಾಣದಲ್ಲಿ ಮದ್ಯ ಸಾಗಾಟ ಮಾಡುತ್ತಿರುವುದು ಅಪರಾಧವೆಂದು ತಿಳಿಸಿ ಪರವಾನಿಗೆ ಬಗ್ಗೆ ಕೇಳಲಾಗಿ ನನ್ನ ಬಳಿ ಯಾವುದು ಇಲ್ಲವೆಂದು ತಿಳಿಸಿರುತ್ತಾನೆ. ಅಕ್ರಮ ಮದ್ಯ ಸಾಗಾಟ ಅಭಕಾರಿ ಅಡಿಯಲ್ಲಿ ಅಪರಾಧವಾಗಿರುತ್ತದೆಂದು ತಿಳಿಸಲಾಗಿರುತ್ತದೆ. ವಾಹನ ಚಾಲಕನ ಹೆಸರು ಮತ್ತು ವಿಳಾಸ ಕೇಳಲಾಗಿ ಮುನಿನರಸಯ್ಯ ಎಂದು ತಿಳಿಸಿರುತ್ತಾರೆ. ಚಾಸಾ 4 ಅವರು ವಾಹನವನ್ನು ಮತ್ತು ಮು. ಮಾ. ಗಳನ್ನು ಇಲಾಖಾ ವಶಕ್ಕೆ ಪಡೆಯಲಾಯಿತು. ಆರೋಪಿಯನ್ನು ದಸ್ತಗಿರಿ ಮಾಡಲಾಯಿತು. ಮಾದರಿ ಸೀಲಿನ ಚೀಟಿಯನ್ನು ತಯಾರಿಸಿ ಮು. ಮಾ. ನ ಚೀಲಕ್ಕೆ ಅಂಟಿಸಲಾಯಿತು. ಪಂಚನಾಮೆಯನ್ನು 10.45 ರಿಂದ 11.30 ರವರೆಗೆ ಮಾಡಿ ಚಾಸಾ 4 ತಂದಿದ್ದ ಹೆಚ್.ಪಿ ಲ್ಯಾಪಟಾಪ್ ನಲ್ಲಿ ತಯಾರಿಸಿ ಇಲಾಖಾ ವಾಹನದ ಪ್ಲಗ್ ಬಳಸಿ ಪ್ರಿಂಟ್ ತೆಗೆಯಲಾಯಿತು. ಪಂಚನಾಮೆಯನ್ನು ನಿ.ಪಿ 1 ಎಂದು ಸಹಿ ನಿ.ಪಿ.1(ಎ) ಎಂದು ಗುರುತಿಸಲಾಯಿತು. ಮು.ಮಾ.1 ರಿಂದ 3 ಎಂದು ಗುರುತಿಸಲಾಯಿತು. ಲೀಸ್ಟ ಆಫ್. ಆರ್ಟಿಕಲ್ಸ್

ಅದನ್ನು ನಿ.ಪಿ 2 ಎಂದು ಸಹಿ ನಿ.ಪಿ 2(ಎ)ಎಂದು ಗುರುತಿಸಲಾಯಿತು. ಮಾದರಿ ಸೀಲಿ ನಕಲನ್ನು ನಿ.ಪಿ 3 ಎಂದು ಸಹಿ ನಿ.ಪಿ 3(ಎ) ಎಂದು ಗುರುತಿಸಲಾಯಿತು. ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಶೋದನಾ ವಾರೆಂಟ್ ಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 4 ಎಂದು ಸಹಿ ನಿ.ಪಿ 4 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.